# ಕರ್ನಾಟಕ ಲೋಕಾಯುಕ್ತ

ಸಂಖ್ಯೆ: ಕಂಪ್ಲೆಂಟ್\ಉಪಲೋಕ್\ಬಿಡಿ\2636\2014\ಸನಿಕಾಸ-1

ಬಹುಮಹಡಿಗಳ ಕಟ್ಟಡ,
ಡಾ॥ಬಿ.ಆರ್.ಅಂಬೇಡ್ಕರ್ ವೀಧಿ,
ಬೆಂಗಳೂರು, ದಿನಾಂಕ:06/06/2017

## ಕರ್ನಾಟಕ ಲೋಕಾಯುಕ್ತ ಕಾಯಿದೆ 1984ರ ಕಲಂ 12(1)ರ ಅನ್ವಯ ವರದಿ

**ವಿಷಯ:** ದೂರುದಾರರಾದ ಶ್ರೀಮತಿ ಲಕ್ಷ್ಮೀದೇವಮ್ಮ ಕೋಂ ಲೇಟ್ ರಾಮಣ್ಣ, ಜಂಗಮರಹಳ್ಳಿ ಅಂಚೆ, ನಿಡಗಲ್ ಹೋಬಳಿ, ಪಾವಗಡ ತಾಲ್ಲೂಕು, ತುಮಕೂರು ಜಿಲ್ಲೆ ರವರ ದೂರನ್ನು ಪರಿಹರಿಸುವ ಬಗ್ಗೆ.

*******

ತುಮಕೂರು ಜಿಲ್ಲೆಯ, ಪಾವಗಡ ತಾಲ್ಲೂಕು, ನಿಡಗಲ್ ಹೋಬಳಿಯ ಶ್ರೀಮತಿ ಲಕ್ಷ್ಮೀದೇವಮ್ಮ (ಇನ್ನು ಮುಂದೆ "ದೂರುದಾರರು" ಎಂದು ಕರೆಯಲ್ಪಡುತ್ತಾರೆ) ತಮ್ಮ ದೂರಿನಲ್ಲಿ ತುಮಕೂರು ಜಿಲ್ಲೆಯ ಪಾವಗಡ ತಾಲ್ಲೂಕಿನ ತಾಲ್ಲೂಕು ಭೂಮಾಪನ ಕಛೇರಿಯ ಪರ್ಯಾವೇಕ್ಷಕರಾಗಿದ್ದ, ಶ್ರೀ ಅಶ್ವಥ್ ನಾರಾಯಣ (ಇನ್ನು ಮುಂದೆ "ಎದುರುದಾರ" ಎಂದು ಕರೆಯಲ್ಪಡುತ್ತಾರೆ) ರವರ ವಿರುದ್ಧ ಅವ್ಯವಹಾರದ ಬಗ್ಗೆ ನೀಡಿದ ದೂರನ್ನು, ಕರ್ನಾಟಕ ಲೋಕಾಯುಕ್ತ ಕಾಯಿದೆಯ ಕಲಂ 9ರ ಅಡಿಯಲ್ಲಿ ತನಿಖೆಗೆ ತೆಗೆದುಕೊಂಡಿದ್ದಿದೆ.

2) **ದೂರಿನ ಸಂಕ್ಷಿಪ್ತ ವಿವರಣೆ:** ತುಮಕೂರು ಜಿಲ್ಲೆ, ಪಾವಗಡ ತಾಲ್ಲೂಕು, ಉದ್ದಗಟ್ಟೆ ಗ್ರಾಮದ ಸರ್ವೆ ನಂ.6,8 ಮತ್ತು 47ರ ಜಮೀನನ್ನು ಡಿ.ಡಿ.ಎಲ್.ಆರ್. ರವರ ಆದೇಶದಂತೆ ಸರ್ವೆ ಮಾಡದೇ, ಕೇವಲ ಸರ್ವೆ ನಂ.47ರ ಜಮೀನನ್ನು ಅಳತೆ ಮಾಡಿ ಕಡಿಮೆ ವಿಸ್ತೀರ್ಣಕ್ಕೆ ಸಂಬಂಧಪಟ್ಟಂತೆ ದಾಖಲೆ ತಯಾರಿಸಿರುತ್ತಾರೆಂದು ಆಪಾದಿಸಿ, ಸದರಿಯವರ ವಿರುದ್ಧ ಸೂಕ್ತ ಕ್ರಮ ಕೈಗೊಳ್ಳಬೇಕೆಂದು ಕೋರಿದ್ದಾರೆ.

3) ಸದರಿ ದೂರಿಗೆ ಎದುರುದಾರರಿಂದ ಆಕ್ಷೇಪಣೆಯನ್ನು ಕೇಳಲಾಗಿ, ಎದುರುದಾರರು ತಮ್ಮ ಆಕ್ಷೇಪಣೆಯಲ್ಲಿ –

ಉದಗಟ್ಟ ಗ್ರಾಮದ ರಿ. ಸರ್ವೆ ನಂ.6,8 ಮತ್ತು 47ರ ಜಮೀನುಗಳ ಬಾಬ್ತು ಭೂದಾಖಲೆಗಳ ಉಪನಿರ್ದೇಶಕರು, ತುಮಕೂರು ರವರ ನ್ಯಾಯಾಲಯದ ಆದೇಶ ಸಂಖ್ಯೆ:ಭೂಉನಿ/ಅಪೀಲು/27/2006–07 ರಂತೆ ಈ ಹಿಂದೆ ದುರಸ್ತಾದ ಹಿಸ್ಸಾ ದುರಸ್ತಿಯನ್ನು ರದ್ದು ಪಡಿಸಿ ಎಲ್ಲಾ ಜಂಟಿ ಖಾತೆದಾರರಿಗೆ ನೋಟೀಸ್ ನೀಡಿ ಪರಿಶೀಲಿಸಿ, ಅಳತೆ ಕಾರ್ಯ ಪೂರೈಸುವಂತೆ ತಿಳಿಸಿದ್ದು, ಅದರಂತೆ ದಿ:22.09.2012ರಂದು ಅರ್ಜಿ ನೀಡಿದ್ದು, ಆದರೆ ದೂರುದಾರರು ಅರ್ಜಿಯ ಜೊತೆ ಕೇವಲ ಉಪನಿರ್ದೇಶಕರವರ ಆದೇಶದ ಪ್ರತಿಯನ್ನು ಮಾತ್ರ ನೀಡಿದ್ದು, ಸದರಿ ಜಮೀನುಗಳಿಗೆ ಸಂಬಂಧಪಟ್ಟ ಹಕ್ಕು ಪತ್ರ , ಪಹಣಿ ಪತ್ರಿಕೆ ಹಾಗೂ ಇತರೆ ದಾಖಲೆಗಳನ್ನು ಹಾಜರು ಪಡಿಸಿರುವುದಿಲ್ಲ. ಈ ಬಗ್ಗೆ ದಿ:14.10.2016ರಂದು ದೂರುದಾರರಿಗೆ ನೋಟಿಸ್ ನೀಡಲಾಗಿರುತ್ತದೆ. ದಿ:23.11.2012ರಂದು ಸಂಬಂಧಪಟ್ಟ ದಾಖಲೆಗಳನ್ನು ಸಲ್ಲಿಸುತ್ತಿರುವುದಾಗಿ ಅರ್ಜಿ ನೀಡಿದ್ದು, ಸದರಿ ಅರ್ಜಿ ಅಧಿಕೃತವಾಗಿರುವುದಿಲ್ಲ ಮತ್ತು ಸಂಶಯಾಸ್ಪದವಾಗಿರುತ್ತದೆ. ಸದರಿ ಅರ್ಜಿ ಸ್ವೀಕರಿಸಿದ ಬಗ್ಗೆ ಕಛೇರಿಯಿಂದ ಅಧಿಕೃತ ಮೊಹರು ಹಾಕಿ ಸ್ವೀಕೃತಿ ಪಡೆದಿರುವುದಿಲ್ಲ. ಅಲ್ಲದೇ ಸ್ವೀಕೃತಿ ಆರ್.ಇ.ಡಿ. ನಂ.23/2011–12ಎಂದು ನಮೂದಾಗಿದ್ದು, ಸದರಿ ಅರ್ಜಿ ಪಡೆದಿರುವುದು ಯಾರು ಎಂಬುದಾಗಿ ನಿರ್ದಿಷ್ಟವಾಗಿ ತಿಳಿಸಿರುವುದಿಲ್ಲ. ಸದರಿ ಜಮೀನುಗಳಿಗೆ ಸಂಬಂಧಪಟ್ಟಂತೆ `ಈಗಲೂ ಸಹ ದೂರುದಾರರು ಕಾನೂನು ರೀತಿ ಹಕ್ಕು ದಾಖಲೆಗಳನ್ನು ಹಾಜರು ಪಡಿಸಿದಲ್ಲಿ ಕ್ರಮ ಕೈಗೊಳ್ಳಲಾಗುವುದು. ದೂರುದಾರರು ಸಲ್ಲಿಸಿರುವ ಅರ್ಜಿಗಳಿಗೆ ದಿ:22.09.2012 ಮತ್ತು 11.10.2013ರ ತಹಸೀಲ್ದಾರ್‌ರವರ ಕಾರ್ಯಲಯದ ದಿನಾಂಕಿತ ಮೊಹರು ಹಾಕಿ ಸ್ವೀಕೃತಿ ನೀಡಲಾಗಿದೆ. ಮಂಗಳವಾಡ ಗ್ರಾಮದ ವಾಸಿಯಾದ ದೊಡ್ಡೀರನಾಯ್ಕ ಬಿನ್ ಈರಣ್ಣ ಎಂಬುವರು ಸರ್ವೆ ನಂ.47ರಲ್ಲಿ 4 ಎಕರೆ 15 ಗುಂಟೆ ಹಕ್ಕು ದಾಖಲೆ ಹೊಂದಿದ್ದು , 11ಇ ನಕ್ಷೆ ಕೋರಿ ಅರ್ಜಿ ಸಲ್ಲಿಸಿದ್ದು, ದಿ:07.10.2013ರಂದು ಭೂಮಾಪಕರು ಸ್ಥಳಕ್ಕೆ ಹೋದಾಗ 11ಇ ನಕ್ಷೆ ಅವಶ್ಯಕತೆಯಿಲ್ಲವೆಂಬುದಾಗಿ ಪ್ರಕರಣ ಮುಕ್ತಾಯಗೊಳಿಸಲಾಗಿರುತ್ತದೆ. ಅದೇ ರೀತಿ ದಿ:11.11.2013ರಂದು ಸದರಿಯವರು ಸರ್ವೆ ನಂ.47ರಲ್ಲಿ 4 ಎಕರೆ 15 ಗುಂಟೆ ಹಕ್ಕು ದಾಖಲೆ ಹೊಂದಿದ್ದು ಉಪ ನಿರ್ದೇಶಕರು, ತುಮಕೂರು ನ್ಯಾಯಾಲಲಯದ ಆದೇಶದಂತೆ ಹಿಸ್ಸಾ ಫೋಡಿಗಳನ್ನು ರದ್ದು ಪಡಿಸಲು ಅರ್ಜಿ ಸಲ್ಲಿಸಿರುತ್ತಾರೆ. ಅದರಂತೆ ಫೋಡಿ ಸಿಆರ್.1/14–15ರಂತೆ ಆದೇಶಿಸಲಾಗಿದೆ. ಸರ್ವೆ ನಂ.47/1ರ ಅರ್ಜಿದಾರರಾದ ದೊಡ್ಡೀರನಾಯ್ಕ್ ರವರಿಗೆ ಖರಾಬು ಜಾತ 4 ಎಕರೆ 15 ಗುಂಟೆ ಮತ್ತು 47/2 ಫೋಡು ದೂರುದಾರರಿಗೆ ಕರಿಯಣ್ಣ ಬಿನ್ ಕೊಂಡಪ್ಪ ರವರಿಗೆ 38 ಗುಂಟೆ ಮತ್ತು 47/3 ಪೋಡು ಖರಾಬು ಜಾತ 3 ಎಕರೆ ಹಕ್ಕುದಾರರಾಗಿ ಅಜ್ಜಣ್ಣ ಬಿನ್ ಸಣ್ಣೀರಪ್ಪನವರಿಗೆ ದುರಸ್ತಿ ಮಾಡಲಾಗಿರುತ್ತದೆ. ದೂರುದಾರರು ಉಳಿದ ಸರ್ವೆ ನಂ.ಗಳಾದ 6 ಮತ್ತು 8ರ ಬಾಬ್ತು ಹಕ್ಕು ದಾಖಲೆಗಳನ್ನು ಹಾಜರು ಪಡಿಸಿದಲ್ಲಿ ತಕ್ಷಣ ಕ್ರಮ ಕೈಗೊಳ್ಳಲಾಗುವುದು. ಇದರಲ್ಲಿ ತಮ್ಮ ಯಾವುದೇ ಕರ್ತವ್ಯ ಲೋಪವಿರುವುದಿಲ್ಲವೆಂದು ಹೇಳಿದ್ದಾರೆ.

4) ಎದುರುದಾರರ ಆಕ್ಷೇಪಣೆಗಳಿಗೆ ದೂರುದಾರರಿಂದ ಪ್ರತ್ಯುತ್ತರ ಕೇಳಲಾಗಿ, ದೂರುದಾರರು ತಮ್ಮ ಪ್ರತ್ಯುತ್ತರದಲ್ಲಿ –

ದಿ:09.03.2009ರಂದು ಸದರಿ ಜಮೀನುಗಳಿಗೆ ನ್ಯಾಯಾಲಯದ ಆದೇಶ ಪಹಣಿ ಪತ್ರಿಕೆ ಮತ್ತು ಹಕ್ಕು ಬದಲಾವಣಾ ವಹಿಗಳನ್ನು ನೀಡಿ ಹಿಂಬರಹ ಪಡೆಯಲಾಗಿರುತ್ತದೆ. ಸದರಿ ಜಮೀನುಗಳ ಪೈಕಿ ಸರ್ವೆ

ನಂ.47ನ್ನು ಮಾತ್ರ ಅಳತೆ ಮಾಡಿ ಕ್ರಯಕ್ಕೆ ಮಾರಾಟ ಮಾಡಲು ಅನುಕೂಲ ಮಾಡಿಕೊಂಡಿರುತ್ತರೆ. ಆದರೆ ಸರ್ವೆ 6 ಮತ್ತು 8ರ ಜಮೀನುಗಳ ಅಳತೆ ಕಾರ್ಯ ಮಾಡದೇ, ಯಥಾ ಸ್ಥಿತಿ ಉಳಿಸಿರುತ್ತಾರೆ ಎಂದು ಹೇಳಿದ್ದಾರೆ.

5) ಕಡತ ಮತ್ತು ದಾಖಲೆಗಳನ್ನು ಕೂಲಂಕಷವಾಗಿ ಪರಿಶೀಲಿಸಲಾಗಿ, ಕಂಡು ಬರುವ ಅಂಶಗಳೇನೆಂದರೆ:

ತುಮಕೂರು ಜಿಲ್ಲೆ, ಪಾವಗಡ ತಾಲ್ಲೂಕು ಉದ್ದಗಟ್ಟ ಗ್ರಾಮದ ಸರ್ವೆ ನಂ.6,8 ಮತ್ತು 47ರ ಜಮೀನು ಮೂಲತ: ದೂರುದಾರರಿಗೆ ಸಂಬಂಧಿಸಿದ್ದು, ಸದರಿ ಜಮೀನುಗಳ ಬಗ್ಗೆ ಭೂದಾಖಲೆಗಳ ತಾಂತ್ರಿಕ ಸಹಾಯಕರು ಮತ್ತು ಉಪ ನಿರ್ದೇಶಕರು ತುಮಕೂರು ರವರ ನ್ಯಾಯಾಲಯಕ್ಕೆ ದೂರುದಾರರು ಪ್ರಕರಣ ಸಂಖ್ಯೆ:27/2006–07ರಂತೆ ದಾಖಲಿಸಿದ್ದು, ನ್ಯಾಯಾಲಯವು ಸದರಿ ಜಮೀನುಗಳಗೆ ಈ ಹಿಂದೆ ಇದ್ದ ಆದೇಶವನ್ನು ರದ್ದು ಪಡಿಸಿ ಎಲ್ಲಾ ಜಂಟಿ ಖಾತೆದಾರರಿಗೆ ತಿಳುವಳಿಕೆ ನೀಡಿ ಹೊಸದಾಗಿ ಅಳತೆ ಕಾರ್ಯ ಪೂರೈಸಿ ನಿಯಮಾನುಸಾರ ಇತ್ಯರ್ಥ ಪಡಿಸಲು ಆಧೇಶಿಸಿರುತ್ತಾರೆ. ಅದರಂತೆ ದೂರುದಾರರು ಎದುರುದಾರರ ಕಛೇರಿಗೆ ದಿ;22.11.2012ರಂದು ಅರ್ಜಿ ಸಲ್ಲಿಸಿದ್ದು ಅದರಲ್ಲಿ ಸ್ವೀಕೃತಿ ಸಂಖ್ಯೆ:ಆರ್ಇಡಿಸಿ ದಿ:23.11.2012ಎಂದು ನಮೂದಿಸಲಾಗಿರುತ್ತದೆ. ಎದುರುದಾರರು ತಮ್ಮ ಆಕ್ಷೇಪಣೆಯಲ್ಲಿ ಸದರಿ ಜಮೀನುಗಳಿಗೆ ಸಂಬಂಧಪಟ್ಟಂತೆ ಯಾವುದೇ ದಾಖಲೆಗಳನ್ನು ಹಾಜರು ಪಡಿಸಿಲ್ಲ ಎಂಬುದಾಗಿ ತಿಳಿಸಿರುತ್ತಾರೆ. ಆದರೆ ದೂರುದಾರರು ನೀಡಿದ ಅರ್ಜಿ ಮತ್ತು ದಾಖಲೆಗಳ ಬಗ್ಗೆ ಸ್ವೀಕೃತಿ ನೀಡಿರುವುದು ದಾಖಲೆಗಳಿಂದ ಕಂಡುಬರುತ್ತದೆ. ಅದೇ ರೀತಿ ಸರ್ವೆ ನಂ.47ರ ಜಮೀನಿಗೆ ಸಂಬಂಧಪಟ್ಟಂತೆ ನ್ಯಾಯಾಲಯದ ಆದೇಶದಂತೆ ಅಳತೆ ಕಾರ್ಯ ಪೂರೈಸಿ ದಾಖಲೆಗಳನ್ನು ತಯಾರಿಸಿರುವುದು ಕಂಡು ಬರುತ್ತದೆ. ಆದರೆ ಸರ್ವೆ ನಂ.6 ಮತ್ತು 8ಕ್ಕೆ ಸಂಬಂಧಪಟ್ಟಂತೆ ನ್ಯಾಯಾಲಯದ ಆದೇಶದಂತೆ ಈವರೆವಿಗೂ ಸಹ ಎದುರುದಾರರು ಅಳತೆ ಕಾರ್ಯ ಮಾಡಿ ದಾಖಲೆಗಳನ್ನು ತಯಾರಿಸದೆ ಇರುವುದು ಮೇಲ್ನೋಟಕ್ಕೆ ಕಂಡುಬಂದಿದೆ. ಡಿಡಿಎಲ್ಆರ್ರವರ ನ್ಯಾಯಾಲಯದ ಆದೇಶ ಸಂಖ್ಯೆ:27/2006–07ರ ಆದೇಶದಂತೆ ದೂರುದಾರರು ಸದರಿ ಜಮೀನುಗಳಿಗೆ ಸಂಬಂಧಪಟ್ಟ

ಎಲ್ಲಾ ದಾಖಲೆಗಳನ್ನು ಹಾಜರು ಪಡಿಸಿದ್ದರೂ ಸಹ ಅವುಗಳ ಬಗ್ಗೆ ಅಳತೆ ಕಾರ್ಯ ಮಾಡದೇ ಅನಾವಶ್ಯಕವಾಗಿ ಕಾಲಹರಣ ಮಾಡಿ ಎದುರುದಾರರು ಕರ್ತವ್ಯ ಲೋಪವೆಸಗಿರುವುದು ಮೇಲ್ನೋಟಕ್ಕೆ ಕಂಡುಬಂದಿದೆ.

6) ಮೇಲ್ಕಂಡ ಅಂಶಗಳು, ಕಡತದ ಸಂಗತಿಗಳು ಹಾಗೂ ದಾಖಲಾತಿಗಳನ್ನು ಕೂಲಂಕಷವಾಗಿ ಪರಿಶೀಲಿಸಿದಾಗ, ಸದರಿ ಎದುರುದಾರರ ವಿರುದ್ಧದ ನಡವಳಿಯನ್ನು ಕೈಬಿಡಲು ಸೂಕ್ತ/ ಸಮಂಜಸ/ ಸಮಾಧಾನಕರ ಕಾರಣ ಇಲ್ಲವೆಂಬ ಅಭಿಪ್ರಾಯಕ್ಕೆ ಬರಲಾಗಿ, ಕರ್ನಾಟಕ ಲೋಕಾಯುಕ್ತ ಕಾಯಿದೆ ಕಲಂ 12(3)ರ ಅಡಿ ಕ್ರಮ ಕೈಗೊಳ್ಳಲು ಸಕ್ಷಮ ಪ್ರಾಧಿಕಾರಕ್ಕೆ ಶಿಫಾರಸ್ಸು ಮಾಡಲಾಗಿದೆ.

7) ಆದ್ದರಿಂದ, ದೂರುದಾರರಿಗೆ ಸಂಬಂಧಪಟ್ಟ ಸರ್ವೆ ನಂ.6, 8 ಮತ್ತು ಸರ್ವೆ ನಂ.47ರ ಜಮೀನುಗಳನ್ನು ಭೂದಾಖಲೆಗಳ ಉಪನಿರ್ದೇಶಕರು, ತುಮಕೂರು ರವರ ನ್ಯಾಯಾಲಯದ ಆದೇಶ ಸಂಖ್ಯೆ:ಭೂಉನಿ/ಅಪೀಲು/27/2006-07 ರಂತೆ ಸೂಕ್ತ ಕ್ರಮ ಕೈಗೊಳ್ಳಲು ಕರ್ನಾಟಕ ಲೋಕಾಯುಕ್ತ ಕಾಯಿದೆ ಕಲಂ 12(1)ರ ಅಡಿ ಪ್ರದತ್ತವಾದ ಅಧಿಕಾರದಡಿ, ಈಗ, ಈ ವರದಿ ಮೂಲಕ, ಸಕ್ಷಮ ಪ್ರಾಧಿಕಾರಕ್ಕೆ ಶಿಫಾರಸ್ಸು ಮಾಡಲಾಗುತ್ತಿದೆ.

8) ಹಾಗೆಯೇ, ಕರ್ನಾಟಕ ಲೋಕಾಯುಕ್ತ ಕಾಯಿದೆ 1984 ಕಲಂ 12(2)ರ ಪ್ರಕಾರ ಸಕ್ಷಮ ಪ್ರಾಧಿಕಾರವು, ಈ ವರದಿಯ ಮೇಲೆ ಏನು ಕ್ರಮ ಕೈಗೊಂಡಿದೆ ಅಥವಾ ಏನು ಕ್ರಮ ಕೈಗೊಳ್ಳಲಾಗುತ್ತದೆ ಎಂಬುದರ ಬಗ್ಗೆ ಈ ವರದಿಯನ್ನು ಸ್ವೀಕರಿಸಿದ **ಒಂದು ತಿಂಗಳೊಳಗೆ** ಈ ಪ್ರಾಧಿಕಾರಕ್ಕೆ ತಿಳಿಸಲು ಹೇಳಿದೆ.

Sd/- .6/6/17.

**(ನ್ಯಾಯಾಮೂರ್ತಿ ಸುಬಾಷ್ ಬಿ ಅಡಿ)**
**ಉಪಲೋಕಾಯುಕ್ತ-2,**
**ಕರ್ನಾಟಕ ರಾಜ್ಯ.**